# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

## ಸಿಸಿ ನಂ 211/2024

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 12-05-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಗೂಳಪ್ಪ ಕಳ್ಳಿಮನಿ | | **ಪ್ರಾ.ಸಾ ಃ 04** |
| **ತಂದೆ ಃ ಗಂಡ ಹೆಸರು** | ಃ ಬಸವಣ್ಣೆಪ್ಪ | | **ಚಾ.ಸಾ ಃ 08** |
| **ವಯಸ್ಸು** | ಃ 77 ವರ್ಷ | | |
| **ಉದ್ಯೋಗ** | ಃ ವ್ಯವಸಾಯ | | |
| **ವಾಸಸ್ಥಳ** | ಃ ವಿಟ್ಲಾಪುರ | | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ಪರಿಚಯ ಇಲ್ಲ. ನನಗೆ ಚಾಸಾ-9 ರವರ ಪರಿಚಯ ಇದೆ ಸುಮಾರು 2 ವರ್ಷಗಳ ಹಿಂದೆ ಚಾಸಾ-10 ರವರು ಮೃತಪಟ್ಟಿದ್ದಾರೆ. ನನಗೆ ಆರೋಪಿಯ ಪರಿಚಯ ಇದೆ. ಆರೋಪಿ ನನ್ನ ಅಣ್ಣನ ಮಗ.

ನನಗೆ ಅಪಘಾತದ ಬಗ್ಗೆ ಯಾವುದೆ ಮಾಹಿತಿ ಇಲ್ಲ. ಸುಮಾರು 2 ವರ್ಷಗಳ ಹಿಂದೆ ನನ್ನ ತಮ್ಮ ಚಾಸಾ-10 ರವರಿಗೆ ಪಾರ್ಶುವಾಯು ಹೊಡೆದಿದ್ದರಿಂದ ಪ್ರಜ್ಞೆ ತಪ್ಪಿದ್ದು ಆತನ್ನು ಆಸ್ಪತ್ರೆಗೆ ಕೆರದುಕೊಂಡು  ಹೋಗುವಾಗ ಅಪಘಾತವಾಗಿರುತತದೆ. ಅಪಘಾತದಲ್ಲಿ ನನಗೆ ಗಾಜಿನ ಚೂರುಗಳು ತಲೆಗೆ ಬಿದ್ದಿದ್ದರಿಂದ ಪ್ರಜ್ಞೆ ತಪ್ಪಿತ್ತು. ಅಪಘಾತ ಕಲಘಟಗಿ ತಾಲೂಕ ದೇವಿಕೊಪ್ಪ ಗ್ರಾಮದ ಹತ್ತಿರ ಆಗಿರುತ್ತದೆ. ಸದರಿ ಅಪಘಾತ 4-30 ರಿಂದ 5-00 ಗಂಟೆ ಆಗಿರುತ್ತದೆ. ಆ ಸಮಯದಲ್ಲಿ ನಾವು ಕಾರಿನಲ್ಲಿ ಪ್ರಯಾಣಿಸುತ್ತಿದ್ದೆವು. ಅಪಘಾತ ಪಡಿಸಿದ ಇನ್ನೊಂದು ವಾಹನ ಯಾವುದೆ ಎಂದು ನನಗೆ ಗೊತ್ತಿಲ್ಲ. ನಮ್ಮ ವಾಹನವನ್ನು ಉಮೇಶ ಆರೋಪಿ ಚಲಾಯಿಸುತ್ತಿದ್ದ. ಅಪಘಾತದಲ್ಲಿ ನನ್ನ ತಮ್ಮ ಚಾಸಾ-10 ರವರಿಗೆ ಹೊಟ್ಟೆಗೆ, ತಲೆಗೆ ಗಾಯಗಳಾಗಿದ್ದವು. ಬೇರೆ ಯಾರಿಗೂ ಯಾವುದೆ ಹಾನಿ ಆಗಿರುವುದಿಲ್ಲ. ನಾನು ಅಪಘಾತದ ಕುರಿತು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ.

***(ಮಾನ್ಯ  ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 06.10.2022 ರಂದು ಚಾಸಾ-10 ರವರನ್ನು ಕಾರವಾರ ಸಮೀಪದ ಅಳಗಾ ಆಸ್ಪತ್ರೆಗೆ ಕಾರ ನಂ ಕೆಎ 42/ಎ 5975 ರಲ್ಲಿ ಕರೆದುಕೊಂಡು ಹೋಗಿ ಮರಳಿ ಬರುತ್ತಿದ್ದೆವು ಎಂದರೆ ನಿಜ. ಕಾರನ್ನು ಆರೋಪಿ ಚಲಾಯಿಸುತ್ತಿದ್ದ ಎಂದರೆ ನಿಜ. ಆರೋಪಿ ಕಾರನ್ನು ಅತೀ ವೇಗವಾಗಿ ಮತ್ತು ಅಜಾಗೂರಕತೆಯಿಂದ ಚಲಾಯಿಸಿಕೊಂಡು ಬರುತ್ತಿದ್ದಾಗ ಹುಬ್ಬಳ್ಳಿ ಕಾರವಾರ ರಸ್ತೆ ಮೇಲೆ ಕಲಘಟಗಿ ಸಮೀಪ ಜ್ಯೈ ಹಿಂದ ದಾಬಾ ಹತ್ತಿರ ಸಾಯಂಕಾಲ 6-00 ಗಂಟೆಗೆ ಆರೋಪಿ ತನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಟಿ ವಿ ಎಸ್ ಎಕ್ಸಲ್ ನಂ ಕೆಎ 25/ಇವಾಯ್ 7616 ಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಗಾಯಗೊಂಡ ಗಾಯಾಳು ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದರೆ ನಿಜ. ಆರೋಪಿ ಅಪಘಾತವಾದ ನಂತರ ಹೆದರಿ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದರೆ ನಿಜ. ನನಗೆ, ಚಾಸಾ-9 ಹಾಗೂ ಚಾಸಾ-10 ರವರಿಗೆ ಅಪಘಾತದಲ್ಲಿ ಯಾವುದೆ ಗಾಯಗಳು ಆಗಿರಲಿಲ್ಲ ಎಂದರೆ ನಿಜ. ಅಪಘಾತವಾದ ನಂತರ

ನಾನು ಬೇರೆ ವಾಹನ ಮಾಡಿಕೊಂಡು ಚಾಸಾ-10 ರವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿರುತ್ತೇನೆ ಎಂದರೆ ನಿಜ. ಅಪಘಾತದಲ್ಲಿ ಮೃತ ಪಟ್ಟ ವ್ಯಕ್ತಿ ನಾರಾಯಣ ತಂದೆ ಯಲ್ಲಪ್ಪ ಕಾಸರ ಎಂದು ತಿಳಿದುಬಂತು ಎಂದರೆ ಸರಿಯಲ್ಲ. ಮೃತನ ಮಗ ಚಾಸಾ-1 ರವರು ಈ ಬಗ್ಗೆ ದೂರು ನೀಡಿರುತ್ತಾರೆ ಎಂದರೆ ನಿಜ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ನಿಜ. ಅಪಘಾತವು ಆರೋಪಿಯ ನಿರ್ಲಕ್ಷತನದಿಂದ ಆಗಿದ್ದರೂ ಕೂಡಾ ಆತ ನನ್ನ ಸಂಬಂಧಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಆರ್ ಜಿ ವಕೀಲರಿಂದಃ</u>**

ಅಪಪಘಾತ ಹೇಗೆ ಆಗಿದೆ ಎಂದು ನನಗೆ ವಯಕ್ತಿಕ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಪೋಲೀಸರು ನನ್ನ ಸಹಿ ಪಡೆದುಕೊಂಡಿಲ್ಲ. ಎದುರಿನಿಂದ ಬಂದ ಮೋಟರ ಸೈಕಲ ಸವಾರ ತಪ್ಪು ದಿಕ್ಕಿನಲ್ಲಿ ಬಂದು ಅಪಘಾತ ಪಡಿಸಿದ್ದಾನೆ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**